**<u>ದಿನಾಂಕಃ 27.06.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಎ ಎಲ್ ಎಸ್ ವಕೀಲರಿಂದಃ</u>

1989 ರಲ್ಲಿ ಪ್ರತಿವಾದಿಯು ಖರೀದಿಸಿದ 69*69 ಅಡಿ ಅಳತೆಯ ಜಾಗದಲ್ಲಿ 1990 ರಲ್ಲಿ 10*69 ಅಡಿಯಲ್ಲಿ ಹಳೇಯ ತೊಟ್ಟಿ ಮನೆಯ ಪಕ್ಕದಲ್ಲಿ ಮೂರು ಕಡೆ ಗೋಡೆಯುಳ್ಳ ವಾರಾಂಡವನ್ನು ನಿರ್ಮಿಸಿದ್ದಾರೆ ಎಂದರೆ ಸರಿಯಲ್ಲ. ನಿಡಿ-4 ರಲ್ಲಿ ಕಾಣುವ ವರಾಂಡವು ನಮ್ಮ ಮನೆಯಿಂದ ಕಾಣುತ್ತದೆ ಎಂದರೆ ಸರಿ. ಸದರಿ ವರಾಂಡವನ್ನು ಪ್ರತಿವಾದಿಯವರು 2012 ರಲ್ಲಿ ನಿರ್ಮಿಸಿರುತ್ತಾರೆ. ನಿಡಿ-4 ರಲ್ಲಿ ಕಾಣುವ ವರಾಂಡದ ಅರ್ಧಭಾಗವನ್ನು ಹೊಡೆದು ಅಡಿಪಾಯ ತೋಡಿದಾಗ ನಾನು ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ನಿಡಿ-4 ರಲ್ಲಿ ಕಾಣುವ ವರಾಂಡವನ್ನು ಕಟ್ಟುವಾಗ ನಾವು ತಕರಾರು ಸಲ್ಲಿಸಿರುತ್ತೇವೆ. ಸದರಿ ತಕರಾರನ್ನು ಬರವಣಿಗೆಯಲ್ಲಿ ಪಂಚಾಯತಿಗೆ ಸಲ್ಲಿಸಿದ್ದೆವು. ಸದರಿ ನಿಡಿ-4 ರಲ್ಲಿ ಕಾಣುವ ವರಾಂಡವು ಈಗಲೂ ಕೂಡ ಹಾಗೇ ಇದೆ ಎಂದರೆ ಸರಿ. ನಿಡಿ-4 ರಲಿ ಕಾಣುವ ತಳಪಾಯದಲ್ಲಿ ಪ್ರತಿವಾದಿಗಳು ಈಗ ಹೊಸ ಮನೆಯನ್ನು ನಿರ್ಮಿಸಿದ್ದಾರೆ ಎಂದರೆ ಸರಿ. ಸದರಿ ಹೊಸ ಮನೆಯನ್ನು ಹೊಡೆದು ಹಾಕುವಂತೆ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದೇವೆ ಎಂದರೆ ಸರಿ. ನಿಡಿ-5 ರ ಭಾವ ಚಿತ್ರದಲ್ಲಿ ಕಾಣುವ ಮಣ್ಣಿನ ಗೋಡೆಯ ಪಕ್ಕದಲ್ಲಿ ಗರಿಕೆ ಬೆಳೆದಿದೆ ಎಂದರೆ ಸರಿಯಲ್ಲ. ನಿಡಿ-5 ರಲ್ಲಿ ಕಾಣುವ ಗರಿಕೆಯ ಜಾಗದಲ್ಲಿ ಮತ್ತು ವರಾಂಡದಲ್ಲಿ 15*69 ಅಡಿಗಳ ದಾರಿ ಇದೆ ಎಂದು ನಾವು ಈ ದಾವೆಯನ್ನು ಸಲ್ಲಿಸಿರುತ್ತೇವೆ.

ನಿಡಿ-12 ರಲ್ಲಿ ನಮ್ಮ ಮನೆ ಕಾಣುತ್ತದೆ ಎಂದರೆ ಸರಿ. ನಿಡಿ-23 ರಲ್ಲಿ ಕಾಣುವ ಮನೆಯು ನಮ್ಮದಾಗಿರುತ್ತದೆ. ನಮ್ಮ ಮನೆಯ ಹೆಬ್ಬಾಗಿಲು ಉತ್ತರ ದಿಕ್ಕಿಗೆ ಇರುತ್ತದೆ. ಸದರಿ ನಿಡಿ-23 ರಲ್ಲಿ ನಮ್ಮ ಮನೆಯ ಎದುರಿಗೆ ಇರುವ ಕುಳ್ಳೇಗೌಡರವರ ಮನೆ ಕಾಣುತ್ತದೆ. ನಮ್ಮ ಮನೆ ಮತ್ತು ಕುಳ್ಳೇಗೌಡರವರ ಮನೆಯ ನಡುವೆ ಒಂದು ಗಲ್ಲಿ ಇದೆ ಎಂದರೆ ಸರಿ. ಸದರಿ ಗಲ್ಲಿ ರಸ್ತೆಯು ನಿಡಿ-24 ರಲ್ಲಿ ಕಾಣುವ ಅಡ್ಡ ರಸ್ತೆಗೆ ಹೋಗಿ ಸೇರುತ್ತದೆ ಎಂದರೆ ಸರಿ. ಸದರಿ ಅಡ್ಡ ರಸ್ತೆಯು ನಿಡಿ-25, 26 ರಲ್ಲಿ ಕಾಣುವ ಮುಖ್ಯ ರಸ್ತೆಗೆ ಸೇರುತ್ತದೆ ಎಂದರೆ ಸರಿ. ಸದರಿ ನಿಡಿ-23 ಮತ್ತು 24 ರಲ್ಲಿ ಕಾಣುವ ಗಲ್ಲಿ ರಸ್ತೆಯನ್ನು ನಾವು ಮತ್ತು ನಮ್ಮ ಕುಟುಂಬದವರನ್ನು ಹೊರತು ಪಡಿಸಿ ಬೇರೆ ಯಾರು ಉಪಯೋಗಿಸುವುದಿಲ್ಲ ಎಂದರೆ ಸರಿ. ನಮ್ಮ

ಮನೆಯ ಪಕ್ಕದಲ್ಲಿ ಬೇರೆ ಯಾವ ಮನೆಗಳು ಇಲ್ಲದೇ ಇರುವುದರಿಂದ ಸದರಿ ಗಲ್ಲಿ ರಸ್ತೆಯನ್ನು ಬೇರೆ ಯಾರು ಉಪಯೋಗಿಸುವುದಿಲ್ಲ. ನಾನು ಹುಟ್ಟಿನಿಂದಲೂ ನಿಡಿ-23 ಮತ್ತು 24ರಲ್ಲಿ ಕಾಣುವ ಗಲ್ಲಿ ರಸ್ತೆಯಲ್ಲಿ ಓಡಾಡುತ್ತಿದ್ದೇವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಗಾಡಿಗಳನ್ನು ಹೊಡೆದುಕೊಂಡು ಹೋಗಲು ವಾದ ಪತ್ರದ ದಾವಾ ಅನುಸೂಚಿ ಸ್ವತ್ತಿನಲ್ಲಿ ಓಡಾಡುತ್ತಿದ್ದೆವು ಎಂದು ನುಡಿಯುತ್ತಾರೆ. ನಿಡಿ-24ರಲ್ಲಿ ಕಾಣುವ ಅಡ್ಡ ರಸ್ತೆಯಿಂದ ನಮ್ಮ ಮನೆಯ ಹೆಬ್ಬಾಗಿಲಿಗೆ 24 ಅಡಿ ಆಗುತ್ತದೆ ಎಂದರೆ ಸರಿ. ಸದರಿ ನಮ್ಮ ಮನೆಯ ಹೆಬ್ಬಾಗಿಲಿನಿಂದ ದಾವಾ ಅನುಸೂಚಿ ಸ್ವತ್ತಿನ ಮೇಲೆ ಮುಖ್ಯ ರಸ್ತೆಗೆ ಹೋಗಲು ಸುಮಾರು 84 ಅಡಿ ದೂರವಾಗುತ್ತದೆ ಎಂದರೆ ಇರಬಹುದು. ನಮ್ಮ ಮನೆಯ ಗಲ್ಲಿ ರಸ್ತೆಯು ನಿಡಿ-25 ಮತ್ತು 26ರಲ್ಲಿ ಕಾಣುವ ಅಡ್ಡ ರಸ್ತೆಗೆ ಬಂದು ಸೇರುತ್ತದೆ. ಸದರಿ ನಿಡಿ-25 ಮತ್ತು 26ರಲ್ಲಿ ನಮ್ಮ ಕಂಬದ ಮನೆ ಕಾಣುತ್ತದೆ ಎಂದರೆ ಸರಿ. ಸದರಿ ನಮ್ಮ ಮನೆಯು 12 ಕಂಬಗಳುಳ್ಳ ತೊಟ್ಟಿ ಮನೆಯಾಗಿರುತ್ತದೆ. ಸದರಿ 12 ಕಂಬಗಳ ಮಧ್ಯದಲ್ಲಿ ನಮ್ಮ ಮನೆಯ ಮತ್ತೊಂದು ಬಾಗಿಲು ಇದೆ ಎಂದರೆ ಸರಿ. ಸದರಿ ನಿಡಿ-25 ಮತ್ತು 26ರಲ್ಲಿ ಕಾಣುವ ಅಡ್ಡ ರಸ್ತೆಯಲ್ಲಿಯೇ ನಮ್ಮ ತಂದೆ ಮತ್ತು ತಾತಂದಿರು ಎತ್ತಿನ ಗಾಡಿಯನ್ನು ಹೊಡೆದುಕೊಂಡು ಹೋಗುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಅಡ್ಡ ರಸ್ತೆಯು 12 ಅಡಿ ಅಗಲ ಇದೆ ಎಂದರೆ, ಇರಬಹುದು.

ನಿಡಿ-19 ಮತ್ತು 20ರಲ್ಲಿ ಕಾಣುವ ವೆಂಕಾಬ್ ಕೋಳಿ ಸಾಕಾಣಿಕಾ ಕೇಂದ್ರವು ಹೊಸ ಮನೆ ಎಂದರೆ ಸರಿ. ನಿಡಿ-20ರಲ್ಲಿ ಕಾಣುವ ರಸ್ತೆಯು ಮುಖ್ಯ ರಸ್ತೆ ಎಂದರೆ ಸರಿ. ನಿಡಿ-25 ಮತ್ತು 26ರಲ್ಲಿ ಕಾಣುವ ಅಡ್ಡ ರಸ್ತೆಯು ನಿಡಿ-20ರ ಮುಖ್ಯ ರಸ್ತೆಗೆ ಸೇರುತ್ತದೆ ಎಂದರೆ ಸರಿ. ಪ್ರತಿವಾದಿಯವರ ಅಭಿವೃದ್ಧಿಯನ್ನು ಸಹಿಸದೆ ಅವರಿಗೆ ತೊಂದರೆ ನೀಡುವ ಸಲುವಾಗಿ ಅವರ ವಿರುದ್ಧ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1955ರಲ್ಲಿ ನಮ್ಮ ಊರಿನಲ್ಲಿ ಯಾವುದೇ ರಸ್ತೆಗಳು ಆಗಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ 1955ರಲ್ಲಿ ನಮ್ಮ ಊರಿನಲ್ಲಿ ಗಲ್ಲಿ ರಸ್ತೆಗಳು ಮಾತ್ರ ಇದ್ದವು ಎಂದರೆ ಸರಿ. ನಮ್ಮ ಮನೆಯ ಮುಂದಿರುವ ಗಲ್ಲಿ ರಸ್ತೆಯನ್ನು ಮತ್ತು ನಮ್ಮ ಮನೆಯ ಪಶ್ಚಿಮಕ್ಕೆ ಇರುವ ಅಡ್ಡ ರಸ್ತೆಯನ್ನು ನಾವು ಮತ್ತು ನಮ್ಮ ಕುಟುಂಬದವರೆ ತಲತಲಾಂತರದಿಂದ ಉಪಯೋಗಿಸುತ್ತಾ ಬರುತ್ತಿದ್ದೇವೆ ಎಂದರೆ ಸರಿಯಲ್ಲ. ನಮ್ಮ ಮನೆಯ ಪಶ್ಚಿಮಕ್ಕೆ ಇರುವ ಅಡ್ಡ ರಸ್ತೆಯು ದಕ್ಷಿಣಕ್ಕೆ ಇರುವ ಮಠದ ರಸ್ತೆಗೆ ಹೋಗಿ ಸೇರುತ್ತದೆ ಎಂದರೆ ಸರಿ. ಸದರಿ ಮಠದ ರಸ್ತೆಯ ಪಕ್ಕದಲ್ಲಿ ಈಗ ಹಲವಾರು ರಸ್ತೆಗಳನ್ನು ಮಾಡಿದ್ದಾರೆ ಎಂದರೆ ಸರಿ. ಸದರಿ ಮಠದ ರಸ್ತೆಯಲ್ಲಿ ಲಾರಿಗಳು ಓಡಾಡುತ್ತವೆ ಎಂದರೆ ಸರಿಯಲ್ಲ. ನಿಪಿ-1ರ ಕಚ್ಚಾ ರಸ್ತೆಯನ್ನು ನಾವೇ ಈ ದಾವೆಗಾಗಿ

ಸೃಷ್ಟಿಸಿ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಸತ್ಯಾಂಶವನ್ನು ಮರೆಮಾಚಲು ನಿಪಿ-1ರ ಕಚ್ಚಾ ನಕಾಶೆಯನ್ನು ನಾವೇ ತಯಾರಿಸಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ನೀಡುವ ಸಲುವಾಗಿ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಲಯ, ಟಿ ನರಸಿಪುರ